**ಕೂಡಲ ಸಂಗಮದೇವ ದೇವ ನಿಮ್ಮ**
**ಚರಣಕಮಲದೊಳಗಾನು ತುಂಬಿ॥**

ಭಗವಂತನು ನಾರದರಿಗೆ ಹೇಳುತ್ತಾನೆ:

**ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇ ನ ಚ।**
**ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ॥**

''ಎಲೈ ನಾರದನೇ, ನಾನು ವೈಕುಂಠದಲ್ಲಿ ವಾಸಿಸುವುದಿಲ್ಲ, ಯೋಗಿಗಳ ಹೃದಯದಲ್ಲಿಯೂ ಇಲ್ಲ, ನನ್ನ ಭಕ್ತರು ಎಲ್ಲಿ (ನನ್ನನ್ನು ಕುರಿತು) ಭಜನೆ ಮಾಡುತ್ತಾರೆಯೋ ಅಲ್ಲಿರುತ್ತೇನೆ!''

ಭಕ್ತನು ಅನನ್ಯವಾಗಿ ನಿಶ್ಚಿಂತನಾಗಿ, ಸದಾ ಸರ್ವಭಾವದಿಂದಲೂ ಅವನನ್ನೇ ಭಜಿಸುತ್ತಿದ್ದರೆ ಅವನು ಬಹುಬೇಗ ಆವಿರ್ಭೂತನಾಗುತ್ತಾನೆ ಎಂದು ನಾರದರು ಹೇಳುತ್ತಾರೆ.

ಸಮರ್ಥ ರಾಮದಾಸರು ಹೇಳುತ್ತಾರೆ: ''ಭಕ್ತನು ಭಕ್ತಿಭಾವಗಳಿಂದಲೂ, ಶುದ್ಧಾಂತಃಕರಣದಿಂದಲೂ ಭಗವನ್ನಾಮವನ್ನು ಸ್ಮರಿಸುತ್ತಾ ಅತ್ಯಂತ ಪ್ರೇಮವುಕ್ಕಿ ಭಜನೆಯನ್ನು, ನಾಮದ ಗಾಯನವನ್ನು ಮಾಡುತ್ತಾನೆ. ಹೀಗೆ ಭಕ್ತನಿಗೆ ದೇವನ ಹುಚ್ಚುಹಿಡಿದರೆ, ದೇವನಿಗಾದರೂ ಭಕ್ತನ ಹುಚ್ಚು ಹಿಡಿಯುವುದು.''

''ಮಲಗಿ ಹಾಡಲು, ನಿಲುವ ನಾರಾಯಣ; ಕುಳಿತು ಕೀರ್ತನೆ ಮಾಡಿದರೆ ಡೋಲಾಯಮಾನನಾಗುವ. ನಿಂತು ನಾಮವನ್ನುಚ್ಚರಿಸಿದರೆ ಈ ಗೋವಿಂದ ಕುಣಿಯುತ್ತಾನೆ'' ಎಂದು ಸಂತ ತುಕಾರಾಮ ಹೇಳಿದಂತೆ ದೇವನು ಭಕ್ತನೊಡನೆಯೇ ಇರುವನು.

ಪುರಂದರದಾಸರಂತೂ,

**'ನೀನ್ಯಾಕೋ ನಿನ್ನ ಹಂಗ್ಯಾಕೋ ರಂಗ**
**ನಿನ್ನ ನಾಮದ ಬಲವೊಂದಿದ್ದರೆ ಸಾಕೋ'**

– ಎಂದು ಭಗವನ್ನಾಮದ ಮಹಿಮೆಯನ್ನು ಕೊಂಡಾಡಿದ್ದಾರೆ.

ಹೀಗೆ ಎಲ್ಲಾ ದೇಶಕಾಲಗಳಲ್ಲಿ ಆಗಿಹೋದ ಶ್ರೇಷ್ಠ ಸಂತರು ಜನಸಾಮಾನ್ಯರಿಗೆ ಆದರ್ಶಪ್ರಾಯರಾಗಿ ನಡೆದು ಜೀವನ ಸಾಫಲ್ಯವನ್ನು ಸಾಧಿಸುವುದು ಹೇಗೆಂದು ತೋರಿಸಿದರು. ಬಸವಾದಿ ಶರಣರು, ಪುರಂದರಾದಿ ದಾಸವರೇಣ್ಯರು, ತುಲಸೀದಾಸ, ಕಬೀರದಾಸ, ಸೂರದಾಸ, ಸಂತ ಜ್ಞಾನೇಶ್ವರ, ನಾಮದೇವ, ಏಕನಾಥ, ಸಂತ ತುಕಾರಾಮ, ಸಮರ್ಥರಾಮದಾಸ, ಬ್ರಹ್ಮಚೈತನ್ಯ ಗೋಂದಾವಲೇಕರ್ ಮುಂತಾಗಿ ಅನೇಕರು ಭಕ್ತಿಯ ಧ್ವಜವನ್ನೇರಿಸಿ, ಆತ್ಮಸಾಕ್ಷಾತ್ಕಾರದ ಮಾರ್ಗವನ್ನು ತಿಳಿಸಿದರು. ಇಂಥ ಸಂತಶ್ರೇಷ್ಠರು ಬೋಧಿಸಿದ ಮಾರ್ಗವನ್ನು ಅನುಸರಿಸಿ ಭಗವಂತನೆಡೆಗೆ ಅನನ್ಯವಾಗಿ ಶರಣುಹೋಗಿ, ಅಖಂಡವಾಗಿ ಅವನ ನಾಮದಲ್ಲಿ ಇದ್ದಿದ್ದಾದರೆ, ಮನುಷ್ಯನು ಈ ಜನ್ಮದಲ್ಲಿಯೇ ಜೀವನ್ಮುಕ್ತನಾಗುತ್ತಾನೆ. ಅವನಿಗೆ ಜಗವೆಲ್ಲವೂ ಬ್ರಹ್ಮಮಯ, ಭಗವನ್ಮಯವಾಗಿ ಕಾಣತೊಡಗುತ್ತದೆ. ✷

# ಯುವಚೇತನ



ಸತ್ಯ, ಪ್ರೇಮ ಮತ್ತು ನಿಷ್ಕಾಪಟ್ಯದ ಎದುರಿಗೆ ಯಾವುದೂ ನಿಲ್ಲಲಾರದು. ನೀನು ನಿಷ್ಕಪಟಿಯೆ? ಸಾಯುವವರೆಗೂ ಸ್ವಾರ್ಥರಹಿತನಾಗಿರುವೆಯಾ? ಪ್ರೀತಿಸುವೆಯಾ? ಹಾಗಿದ್ದರೆ ಭಯಪಡಬೇಡ. ಮೃತ್ಯುವಿಗೂ ಅಂಜಬೇಡ. ಮುಂದೆ, ನನ್ನ ಹುಡುಗರೆ! ಇಡೀ ಜಗತ್ತಿಗೆ ಇಂದು ಜ್ಞಾನಜ್ಯೋತಿ ಬೇಕಾಗಿದೆ. ಅದು ನಿರೀಕ್ಷಿಸುತ್ತಿದೆ! ಕೇವಲ ಭರತಖಂಡ ಮಾತ್ರ ಅದನ್ನು ಕೊಡಬಲ್ಲುದು. ಇಂದ್ರಜಾಲ, ಮಂತ್ರ, ತಂತ್ರ, ಬೂಟಾಟಿಕೆಗಳನ್ನಲ್ಲ. ನಿಜವಾದ ಧಾರ್ಮಿಕ ಚೈತನ್ಯದ ಮಾಹಾತ್ಮ್ಯೆಯನ್ನು, ಅತ್ಯುನ್ನತವಾದ ಆಧ್ಯಾತ್ಮಿಕ ಸತ್ಯಗಳನ್ನು ಭಾರತ ಕೊಡಬಲ್ಲುದು. ಅದಕ್ಕೇ ದೇವರು ಎಲ್ಲ ಸಂದಿಗ್ಧ ಸ್ಥಿತಿಗಳಿಂದಲೂ ಈ ಜನಾಂಗವನ್ನು ಇಂದಿನವರೆಗೂ ಕಾಪಾಡಿಕೊಂಡು ಬಂದಿದ್ದಾನೆ. ಈಗ ಸಕಾಲವಾಗಿದೆ. ನನ್ನ ಕೆಚ್ಚೆದೆಯ ಹುಡುಗರೇ, ನೀವೆಲ್ಲಾ ಮಹತ್ಕಾರ್ಯಗಳನ್ನು ಸಾಧಿಸಲು ಜನ್ಮವೆತ್ತಿದ್ದೀರಿ ಎಂಬುದರಲ್ಲಿ ವಿಶ್ವಾಸವಿಡಿ. ನಾಯಿಗಳ ಬೊಗಳುವಿಕೆ ನಮ್ಮನ್ನು ಹೆದರಿಸದಿರಲಿ. ಅಷ್ಟೇ ಏಕೆ, ಸ್ವರ್ಗದ ಸಿಡಿಲುಗಳಿಗೂ ಅಂಜಬೇಡಿ. ಎದ್ದೇಳಿ, ಕಾರ್ಯೋನ್ಮುಖರಾಗಿ!

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೪.೧೭೧)*

ನಮಗೆ ಇಂದು ಬೇಕಾಗಿರುವುದೇ ಆತ್ಮನಿಗೆ ಸಂಬಂಧಪಟ್ಟ ಮಹಾಭಾವನೆ, ಅದರ ಅನಂತ ಶಕ್ತಿ, ಪರಿಶುದ್ಧತೆ ಮತ್ತು ಪರಿಪೂರ್ಣತೆ. ನನಗೆ ಒಂದು ಮಗುವಿದ್ದರೆ ಅದು ಹುಟ್ಟಿದಾಗಿನಿಂದಲೂ ಅದಕ್ಕೆ ''ನೀನು ಪರಿಶುದ್ಧಾತ್ಮ'' ಎಂದು ಹೇಳುತ್ತಿದ್ದೆ. ಪುರಾಣದಲ್ಲಿ ಬರುವ ರಾಣಿ ಮದಾಲಸೆಯ ಸುಂದರ ಕಥೆಯನ್ನು ನೀವು ಕೇಳಿರಬಹುದು. ಅವಳಿಗೆ ಮಗುವಾದ ತಕ್ಷಣವೇ ತೊಟ್ಟಿಲಲ್ಲಿ ಇಟ್ಟು ತೂಗುವಾಗ, ''ನೀನು ಪರಿಶುದ್ಧಾತ್ಮ, ಕಳಂಕರಹಿತ, ಪಾಪದೂರ, ಶಕ್ತಿಶಾಲಿ, ಪರಮಶ್ರೇಷ್ಠ'' ಎಂದು ಹಾಡುತ್ತಿದ್ದಳು. ಅದರಲ್ಲಿ ತುಂಬಾ ಸತ್ಯವಿದೆ. ನೀವು ಶ್ರೇಷ್ಠರೆಂದು ಭಾವಿಸಿ, ಶ್ರೇಷ್ಠರಾಗುವಿರಿ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೩.೧೨೦)* ✷

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ಪ್ರಶ್ನೆ:** ಮಹಾರಾಜರೆ, ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಹಾಸಂಘದ ಆದರ್ಶದ ಬಗ್ಗೆ ಹೇಳುವಾಗ, 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂದು ಹೇಳಿದ್ದಾರೆ. ಶಾಸ್ತ್ರಗ್ರಂಥಗಳಲ್ಲಿ ಈ ವಿಚಾರ ಇದೆಯೆ? ಅವರು ಯಾವ ಗ್ರಂಥದಿಂದ ಇದನ್ನು ಉದ್ಧರಿಸಿದ್ದಾರೆ?

**ಮಹಾರಾಜ್:** ಸ್ವಾಮೀಜಿ ಉಚ್ಚರಿಸಿದ್ದೇ ಶಾಸ್ತ್ರ!

**ಪ್ರಶ್ನೆ:** ಅದನ್ನು ನಾವೂ ಒಪ್ಪುತ್ತೇವೆ, ಆದರೂ ಸ್ವಾಮೀಜಿ ಹೇಳಿದ ಎಷ್ಟೋ ವಿಚಾರಗಳು ಶಾಸ್ತ್ರಗಳಲ್ಲಿ ಸಿಗುತ್ತವೆ. ಅಂತೆಯೇ ಈ ವಾಕ್ಯ ಎಲ್ಲಾದರೂ ಸಿಗಬಹುದೆ?

**ಮಹಾರಾಜ್:** ಇದನ್ನು ಶಾಸ್ತ್ರವೆಂದು ಸರಿಯಾಗಿ ಹೇಳಲಾಗದು. ಆದರೆ ಆಚಾರ್ಯ ಶಂಕರರು ಹೇಳುತ್ತಾರೆ, **'ವಸಂತವಲ್ಲೋಕಹಿತಂ ಚರಂತಃ'** ಎಂದು.

**ಪ್ರಶ್ನೆ:** ಸ್ವಾಮೀಜಿ ಸಂನ್ಯಾಸಿಗಳ ಆದರ್ಶವಾಗಿ ಆತ್ಮೋದ್ಧಾರದ ಜೊತೆಗೆ, **ಜಗದ್ಧಿತ** ಎಂಬ ಎರಡನೇ ಸಂಗತಿಯನ್ನು ಸೇರಿಸಿದರು.

**ಮಹಾರಾಜ್:** 'ಜೊತೆಗೆ' ಅನ್ನಬೇಡ. ಅದು ಸಹಾನುಷ್ಠಾನ. ಎರಡರ ಮಹತ್ವವೂ ಕಡಿಮೆಯಲ್ಲ; ಯಾವುದೂ ಹೆಚ್ಚಲ್ಲ.

**ಪ್ರಶ್ನೆ:** ಸ್ವಾಮೀಜಿಗೆ ಮೊದಲು ಸಂನ್ಯಾಸಿಗಳ ಜೀವನ, ಅವರ ಆದರ್ಶ ಹಾಗೂ ಗುರಿ ಎಂದರೆ ಆತ್ಮಸಾಕ್ಷಾತ್ಕಾರ ಮಾತ್ರ. ಸ್ವಾಮೀಜಿ ಈ **ಜಗತ್-ಹಿತ** ಎಂಬುದನ್ನು ಏಕೆ ಸೇರಿಸಿದರು?

**ಮಹಾರಾಜ್:** ಸ್ವಾಮೀಜಿ ಗಮನಿಸಿದರು, ಸಂನ್ಯಾಸಿಗಳು ಆತ್ಮಸಾಕ್ಷಾತ್ಕಾರದ ಹೆಸರಿನಲ್ಲಿ ಸ್ವಾರ್ಥಪರರೂ, ಸೋಮಾರಿಗಳೂ ಆಗಿ, ನಿರ್ದಯಿಗಳಾಗಿ ಜೀವನ ಸಾಗಿಸುತ್ತಿದ್ದರು. ಇದರಿಂದ ಆತ್ಮ ಸಾಕ್ಷಾತ್ಕಾರವೂ ಆಗುತ್ತಿಲ್ಲ, ಇತರರಿಗೆ ಉಪಕಾರವೂ ಆಗುತ್ತಿಲ್ಲ. ಸ್ವಾರ್ಥ ಉದ್ಭವಿಸುವುದೇ ಸಂಕುಚಿತತೆಯಿಂದ. ಮನಸ್ಸಿನ ಮಾಲಿನ್ಯವೇ ಸ್ವಾರ್ಥ. ಚಿತ್ತಶುದ್ಧಿಯು ಆತ್ಮಜ್ಞಾನಕ್ಕೆ ಪೀಠಿಕೆ. ಚಿತ್ತಶುದ್ಧಿ ಉಂಟಾಯಿತೆಂದರೆ ಸ್ವಾರ್ಥಪರತೆ ಹೊರಟುಹೋಗುತ್ತದೆ. **ಜಗದ್ಧಿತ** – ಇದನ್ನು ಪ್ರಾರಂಭದಲ್ಲಿ ಶ್ರೀರಾಮಕೃಷ್ಣರ ಕೆಲವು ಶಿಷ್ಯರೇ ಒಪ್ಪಿರಲಿಲ್ಲ. ಸ್ವಾಮೀಜಿ ಇದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರು, ಅವರನ್ನು ಒಪ್ಪಿಸಿದರು. 'ರಾಮಕೃಷ್ಣ ವಚನವೇದ' ಓದುವಾಗ ಕೆಲವೊಮ್ಮೆ ಜಗತ್ತು ಗೌಣವೆಂದು ಮನಸ್ಸಿಗೆ ಅನ್ನಿಸುತ್ತದೆ. ಪರಮಹಂಸರು ಹೇಳುತ್ತಿದ್ದರು, ಜಗತ್ತಿಗೆ ಉಪಕಾರ ಮಾಡಲು ಅದೇನು ಅಂಗೈ ಅಗಲವೆ? ಈ ವಾಕ್ಯಗಳ ಅರ್ಥವನ್ನು context (ಸಂದರ್ಭ) ನೋಡಿಕೊಂಡು ತಿಳಿದುಕೊಳ್ಳಬೇಕಾಗುತ್ತದೆ.

**ಪ್ರಶ್ನೆ:** ಚಿತ್ತಶುದ್ಧಿಗಾಗಿ **'ಜಗದ್ಧಿತ'** ಎಂಬ ಈ ವ್ಯವಸ್ಥೆ ಸಹಾಯ ಮಾಡುವುದೆ?

**ಮಹಾರಾಜ್:** ಬರೀ ಚಿತ್ತಶುದ್ಧಿಗಾಗಿ ಮಾತ್ರವಲ್ಲ, ಇದಕ್ಕೆ ಆತ್ಮಸಾಕ್ಷಾತ್ಕಾರಕ್ಕೆ ಎಷ್ಟು ಮಹತ್ವವಿದೆಯೋ, ಅಷ್ಟೇ ಜಗದ್ಧಿತಕ್ಕೂ ಮಹತ್ವವಿದೆ.

**ಪ್ರಶ್ನೆ:** ಮಹಾರಾಜರೆ, ಚಿತ್ತಶುದ್ಧಿಯಾದರೆ ಆತ್ಮಸಾಕ್ಷಾತ್ಕಾರವಾದ ಹಾಗೆಂದು ತಾವು ಹೇಳುತ್ತಿದ್ದೀರಿ. ಅಂದರೆ ಎರಡೂ ಒಂದೇ ಎಂದ ಹಾಗಾಯಿತು.

**ಮಹಾರಾಜ್:** ಚಿತ್ತಶುದ್ಧಿ ಮತ್ತು ಜಗದ್ಧಿತ. ಜಗದ್ಧಿತದ ಮೂಲಕ ಚಿತ್ತಶುದ್ಧಿ – ಈ ಮಾತು ಸರಿಯಲ್ಲ. ಆತ್ಮಸಾಕ್ಷಾತ್ಕಾರ ಹಾಗೂ ಜಗದ್ಧಿತ ಇವೇ ಆದರ್ಶ. ಎರಡೂ ಆದರ್ಶವೆ, ಇದನ್ನು ನೆನಪಿಟ್ಟುಕೋ.

**ಪ್ರಶ್ನೆ:** ಮುಕ್ತಿ ನಮ್ಮ ಗುರಿಯಾಗಿರುವಾಗ ಜಗದ್ಧಿತ ಮಾರ್ಗವಲ್ಲವೆ? ಅದನ್ನೇ ನಾವು ಸಾಧನೆ ಎನ್ನುತ್ತೇವೆ.

**ಮಹಾರಾಜ್:** ಮುಕ್ತಿ ಮಾತ್ರ ಗುರಿ ಎಂದು ಯಾರು ಹೇಳಿದರು?

**ಪ್ರಶ್ನೆ:** ಜೀವಾತ್ಮನ ಗುರಿಯೇನು? ಪರಮಾತ್ಮನಲ್ಲಿ ಅದು ಅಭಿನ್ನತೆಯನ್ನು ಹೊಂದುವುದು, ಐಕ್ಯಾನುಭವ ಅಥವಾ ಮುಕ್ತಿ ತಾನೆ?

**ಮಹಾರಾಜ್:** ಶ್ರೀರಾಮಕೃಷ್ಣರು ಸ್ವಾಮೀಜಿಗೆ ಗದರಿಸಲಿಲ್ಲವೆ? ಮುಕ್ತಿಯೇ ಗುರಿಯಾಗಿರುತ್ತಿದ್ದರೆ, ಈ ಗದರಿಸುವಿಕೆಗೆ ಅರ್ಥವೇನು? ಉಚ್ಚ ಅವಸ್ಥೆ ಯಾವುದು? ನಿರ್ವಿಕಲ್ಪ ಸಮಾಧಿಗಿಂತಲೂ ಉಚ್ಚಾವಸ್ಥೆ ಇದೆಯೆಂದು ಪರಮಹಂಸರು ಹೇಳಲಿಲ್ಲವೆ? ಆ ಅವಸ್ಥೆಯೇ ಸರ್ವಭೂತಗಳಲ್ಲಿಯೂ ಬ್ರಹ್ಮದರ್ಶನ ಮಾಡುವುದು ಮತ್ತು ಅವುಗಳ ಸೇವೆ ಮಾಡುವುದು.

**ಪ್ರಶ್ನೆ:** ಕರ್ಮಯೋಗ ಅಥವಾ ಜಗದ್ಧಿತವೇ ನಮ್ಮ ಸಾಧನೆ ಎಂದೇ ನಾವು ಹೇಳುತ್ತಿರುವುದು.

**ಮಹಾರಾಜ್:** ಅದು ಗುರಿ. ಆತ್ಮ ಸಾಕ್ಷಾತ್ಕಾರವೂ ಗುರಿ, ಅಂತೆಯೇ ಜಗದ್ಧಿತವೂ ಗುರಿ.

**ಪ್ರಶ್ನೆ:** ಎರಡೂ ಒಂದೇ ಹೇಗೆ? ಎರಡೂ ಸಮಾನವೆಂದು ಹೇಳಿದಿರಿ. ಎರಡೂ ಮಹತ್ವಪೂರ್ಣವೆಂದೂ ಹೇಳಿದಿರಿ. ಎರಡರ ಗುರಿ ಒಂದೇ ಆದರೂ, ಎರಡೂ ಬೇರೆ ಬೇರೆ ಅಲ್ಲವೆ?

**ಮಹಾರಾಜ್:** ಎರಡೂ ಒಂದೇ ಅಲ್ಲ; ಬೇರೆ ಬೇರೆ. ಕೆಲವರು ಜಗತ್ತಿನ ಹಿತ ಮಾಡಲು ಪ್ರಯತ್ನ ಮಾಡುವರು, ಆದರೆ ಆತ್ಮಸಾಕ್ಷಾತ್ಕಾರಕ್ಕೆ ಗಮನ ಕೊಡುವುದಿಲ್ಲ. ಇನ್ನು ಕೆಲವರು ಬರಿ ಆತ್ಮ ಸಾಕ್ಷಾತ್ಕಾರದ ಕಡೆಗೆ ಮಾತ್ರ ಗಮನ ಕೊಡುವರು, ಜಗದ್ಧಿತದ ಬಗ್ಗೆ ಪ್ರಯತ್ನ ಮಾಡರು. ಸ್ವಾಮೀಜಿ ಹೇಳುತ್ತಾರೆ, ಎರಡಕ್ಕೂ ಸಮಾನ ಆದ್ಯತೆ ಕೊಡಬೇಕು. ಎರಡು ಪದಗಳ ಕೊನೆಯಲ್ಲಿ 'ಚ' ಎಂಬುದರ ಅರ್ಥ 'ಕೂಡ' – ಎಂದರೆ ಎರಡನ್ನೂ ಸಮಾನವಾಗಿ ತೆಗೆದುಕೊಳ್ಳಬೇಕು ಎಂದರ್ಥ. ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಯತ್ನ, ಜೊತೆಗೆ ಜಗದ್ಧಿತ ಮಾಡೋಣ.